2 ನೇ ಹೆಚ್ಚುವರಿ ವ್ಯವಹಾರ  ನ್ಯಾಯಾಧೀಶರು ವ ಪ್ರ.ದ.ನಾ.ದ. ಭದ್ರಾವತಿ

ಪಿಸಿಆರ್. ನಂಃ 331/2023

ಪಿಡಬ್ಲ್ಯು-1

| | | |
|---|---|---|
| ಹೆಸರು | : | ರಿಯಾಜ್ ಬಾಷಾ |
| ವಯಸ್ಸು | : | 44 |
| ಉದ್ಯೋಗ | : | ಮಂಡಕ್ಕಿ ವ್ಯಾಪಾರ |
| ವಾಸಸ್ಥಳ | : | ಸೀಗೆ ಬಾಗಿ |

**ದಿನಾಂಕಃ 31.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಿರ್ಯಾದುದಾರರ ಸ್ವ ಇಚ್ಛಾ ಹೇಳಿಕೆ**

ನನ್ನ ಹೆಸರಿನಲ್ಲಿ ಒಂದು ನಿವೇಶನ ಇತ್ತು. ಅದನ್ನು ನಾನು ಅಲ್ಫುರ್ ಖಾನ್ ,ಮಸ್ಜಿದ್ ಮತ್ತು ಮದರಸಾ ಟ್ರಸ್ಟ್ ಗೆ ದಾನವಾಗಿ ನೀಡಿದ್ದೆ. ನಾನು ಸದರಿ ಟ್ರಸ್ಟ್ ನ ಅಧ್ಯಕ್ಷನಾಗಿದ್ದೆ. ಸದರಿ ಟ್ರಸ್ಟ್ ನವರು ಸದರಿ ನಿವೇಶನದಲ್ಲಿ ಮದರಸದ ಕಟ್ಟಡವನ್ನು ಕಟ್ಟಲು ನಿರ್ಧರಿಸಿದ್ದರು. ಕಟ್ಟಡ ಕಟ್ಟಲು ನಾವು ಭದ್ರಾವತಿ ನಗರಸಭೆಯಿಂದ ಪರವಾನಗೆ ಪಡೆದುಕೊಂಡಿರುತ್ತೇವೆ. ಆರೋಪಿತನು ಸೀಗೆಬಾಗಿಯ ನಿವಾಸಿಯಾಗಿರುತ್ತಾನೆ. ಆರೋಪಿತನು ನನಗೆ ಪದೇ ಪದೇ ಮಸೀದಿ ಕಟ್ಟ ಬಾರದು ಎಂದು ನನಗೆ ಬೆದರಿಕೆ ಹಾಕುವುದು ಹಾಗೂ ಅವಾಚ್ಯ ಶಬ್ದಗಳಿಂದ ಬಯ್ಯುವುದು ಮಾಡುತ್ತಿದ್ದ. ನಮ್ಮ ಬಡಾವಣೆಯಲ್ಲಿರುವ 800-1000 ಜನರಿಗೆ ಅನುಕೂಲವಾಗಲೆಂದು ನಾವು ಮಸೀದಿ ಕಟ್ಟಲು ಪ್ರಾರಂಭಿಸಿದೆವು.

ದಿಃ 23.08.2023 ರಂದು ಆರೋಪಿತನು ನನ್ನ ಮತ್ತು ಇತರರ ವಿರುದ್ಧ ಒಂದು ಕ್ರಿಮಿನಲ್ ಪ್ರಕರಣವನ್ನು ದಾಖಲೆಸಿರುತ್ತಾನೆ ನಾವು ಯಾವುದೇ ರೀತಿಯ ತಪ್ಪು ಮಾಡದೇ ಇದ್ದರೂ ನಮ್ಮ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾನೆ. ನಮಗೆ ಪ್ರಕರಣದ ವಿಚಾರ ತಿಳಿದ ತಕ್ಷಣ ದಿಃ29.08.2023 ರಂದು ಹಳೇನಗರ ಪೋಲೀಸ್ ಠಾಣೆಗೆ ಹೋಗಿ ಆರೋಪಿತನು ಸುಳ್ಳು ದೂರನ್ನು ನೀಡಿರುತ್ತಾನೆ ಎಂದು ಹೇಳಿ ನಾವೂ ಸಹ ಒಂದು ಪಿರ್ಯಾದಿಯನ್ನು ಪೋಲೀಸರಿಗೆ ನೀಡಿರುತ್ತೇವೆ. ಆದರೆ ಪೋಲೀಸರು ಯಾವುದೇ ಕ್ರಮಗಳನ್ನು ಕೈಗೊಳ್ಳಲು ಹಿಂಬರಹ ನೀಡಿ ವಾಪಾಸು ಕಳುಹಿಸಿರುತ್ತಾರೆ.

ಮಸೀದಿ ಕಟ್ಟಲು ತೊಂದರೆ ನೀಡಬಾರದು ಎಂದು ನಿರ್ಬಂಧಕಾಜ್ಞೆ ಕೋರಿ ನಾವು ಸಿವಿಲ್ ದಾವೆಯನ್ನು ಭದ್ರಾವತಿ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇವೆ ಸದರಿ ಮೂಲ ದಾವೆ ಸಂಖ್ಯೆ 447/2022 ಆಗಿರುತ್ತದೆ. ಸದರಿ ಪ್ರಕರಣದಲ್ಲಿ ಆರೋಪಿತನು ಕಟ್ಟಡ ಕಟ್ಟಲು ತೊಂದರೆ ನೀಡಬಾರದು ಎಂದು ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಆಗಿರುತ್ತದೆ . ಸದರಿ ಆದೇಶದ ವಿರುದ್ಧ ಆರೋಪಿತನು ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿ ವಜಾ ಗೊಂಡಿರುತ್ತದೆ. ನಾವು ಪೋಲೀಸ್ ಠಾಣೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯ ದಾಖಲೆಗಳನ್ನು ನೀಡಿರುತ್ತೇವೆ . ದಾಖಲೆಗಳನ್ನು ನೀಡಿದ್ದರೂ ಸಹ ಪೋಲೀಸರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಆರೋಪಿತನು ನಾವು ಕಟ್ಟಡ ಕಟ್ಟುತ್ತಿದ್ದ ಸ್ಥಳಕ್ಕೆ ಅತಿಕ್ರಮ ಪ್ರವೇಶ ಮಾಡಿ ನನಗೆ ಮತ್ತು ಇತರರರಿಗೆ ಅವಾಚ್ಯ

ಶಬ್ದಗಳಿಂದ ಬೈದು ಕೇಸನ್ನು ವಾಪಾಸು ಪಡೆಯಬೇಕು ಎಂದು ಹೇಳಿ ನಮಗೆ ಜೀವ ಬೆದರಿಕೆಯನ್ನು ಹಾಕಿರುತ್ತಾನೆ. ಆದ್ದರಿಂದ ಆರೋಪಿತರ ವಿರುದ್ದ  ಕಾನೂನು ಕ್ರಮ ಕೈಗೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ದಿಃ 29.08.2023 ರ  ದೂರಿನ ಪ್ರತಿಯನ್ನು ನಿಪಿ-1 ಎಂದು, ಹಿಂಬರಹದ ಪ್ರತಿಯನ್ನು ನಿಪಿ-2 ಎಂದು  ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

2 ನೇ ಹೆಚ್ಚುವರಿ  ವ್ಯವಹಾರ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾದಂ. ಭದ್ರಾವತಿ**